ಅಧ್ಯಕ್ಷರು: ಈಗ ಎರಡನೇ ಪೂರಕ ಕಾರ್ಯಕಲಾಪಗಳ ಪಟ್ಟಿ, ಸಭೆಯ ಮುಂದಿಡಲಾಗುವ ಕಾಗದಪತ್ರ.

11. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಕಾರ್ಯದರ್ಶಿ: ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ:

(i)ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ವಿಧೇಯಕ, 2013

(ii)ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಧೇಯಕ, 2013

(iii)ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕ, 2013

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ–14,15 ಮತ್ತು 16)

12. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ವಿಧೇಯಕ,

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಹಿಂದೆ ವಿಚಾರಣೆ ಮಾಡುವ ಅಧಿಕಾರ ಸರಕಾರಕ್ಕೆ ಇರಲಿಲ್ಲ. ಗೌವರ್ನರ್‌ಗೆ ಪತ್ರ

ಬರೆಯಬೇಕಾಗಿತ್ತು, ಏನಾದರೂ ದೂರುಗಳು ಬಂದರೆ ಅವರು ವಿಚಾರಣೆ ನಡೆಸುವ ಅಧಿಕಾರವಿತ್ತು. ಈಗ ವಿಚಾರಣೆ ನಡೆಸುವ ಅಧಿಕಾರ ಸರ್ಕಾರ ತೆಗೆದುಕೊಂಡಿದೆ. ಕಳೆದ ಬಾರಿ ಬೇರೆ ಬೇರೆ ವಿಶ್ವವಿದ್ಯಾಲಯದಲ್ಲಿ ನಿರಂತರವಾಗಿ ಹಗರಣಗಳ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿತ್ತು, ಮಾಧ್ಯಮದವರು ಸರ್ಕಾರ ಏನೂಮಾಡುತ್ತಿಲ್ಲವೆ ಎಂದು ಕೇಳುತ್ತಿದ್ದರು. ಒಂದು ರೀತಿಯ ಅಸಹಾಯಕತೆ ಇತ್ತು. ಅಸಹಾಯಕತೆ ಯಾವತ್ತು ಸರ್ಕಾರಕ್ಕೆ ಬರಬಾರದು ಎಂದು ಅಧಿಕಾರವನ್ನು ಸರ್ಕಾರ create ಮಾಡಿದೆ. ಗೌವರ್ನರ್‌ರವರ ಅಧಿಕಾರ ಕಿತ್ತುಕೊಂಡಿಲ್ಲ. ಆದರೆ, ಸರ್ಕಾರ parallel ಆಗಿ create ಮಾಡುವಂಥ ಕೆಲಸ ಮಾಡಿದೆ. ಹಾಗೆ ಒಂದು ಸಣ್ಣ ತಿದ್ದುಪಡಿ ಮಾಡಿದ್ದು, ಯಾವುದಾದರೂ ಒಂದು ಹಗರಣಗಳ ಬಗ್ಗೆ ತನಿಖೆಗೆ ಕೊಟ್ಟರೆ ಮೂರು ತಿಂಗಳೊಳಗೆ ವಿಚಾರಣೆ ಮಾಡಿ ವರದಿಕೊಡಬೇಕೆಂದು ಮಾಡಿದೆ. ಮುಂಚೆ ವರ್ಷಾನುಗಟ್ಟಲೆ ಆದರೂ ವರದಿ ಕೊಡುತ್ತಿರಲಿಲ್ಲ. ಮೂರು ತಿಂಗಳೊಳಗೆ ವರದಿ ಕೊಡಬೇಕು ಒಂದು ತಿಂಗಳೊಳಗೆ ಕ್ರಮ ಕೈಗೊಳ್ಳಬೇಕು. ಮೊದಲು ಕ್ರಮ ಕೈಗೊಳ್ಳುವುದು ಕೂಡ ಹಾಗೆಯೇ pending ಉಳಿದು ಬಿಡುತ್ತಿತ್ತು. ಈಗ ಒಂದು ತಿಂಗಳೊಳಗಾಗಿ ಕ್ರಮ ಕೈಗೊಳ್ಳಬೇಕೆನ್ನುವ ತಿದ್ದುಪಡಿಯನ್ನು ಸೇರಿಸಿದೆ. ನಾವು Vice chancellor ಅನ್ನು ನೇಮಕ ಮಾಡಿಕೊಳ್ಳಬೇಕಾದರೆ search committee application call ಮಾಡಬೇಕೆಂದು ಹೇಳಿದೆ. ಅವರ ಸ್ವ-ವಿವರಗಳೊಂದಿಗೆ application call ಮಾಡಬೇಕು ಅದನ್ನು stream- line ಮಾಡಿ search committee ಮುಂದೆ ಇಡತಕ್ಕಂಥ ಕೆಲಸ ಮಾಡಬೇಕು. ಅವರು ಸಂದರ್ಶನ ನಡೆಸಬೇಕು. ಅವರ vision ಏನು? ನಾನು ವಿಶ್ವವಿದ್ಯಾಲಯವನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೇವೆ ಎನ್ನುವುದನ್ನು ಅದರಲ್ಲಿ explain ಮಾಡಬೇಕು. ಅದರಲ್ಲಿ merit ಗೆ ಸಂಬಂಧಿಸಿದ ಒಂದು guide-line issue ಮಾಡಿದೆ. ವಿಶ್ವವಿದ್ಯಾಲಯದ Vice chancellor ನೇಮಕವಾಗುವುದಕ್ಕೆ ಯಾವ್ಯಾವ ಅರ್ಹತೆಗಳಿರಬೇಕೆಂದು ಪಟ್ಟಿ ಮಾಡಿದ್ದು ಆ ಅರ್ಹತೆಯ ಮಾನದಂಡಕ್ಕೆ ಅನುಗುಣವಾಗಿ Vice chancellor ನೇಮಕ ಮಾಡಿ-ಕೊಳ್ಳುವುದಕ್ಕೆ ಆ search committeeಗೆ 14 (a) ನಲ್ಲಿ ತಿದ್ದುಪಡಿ ಮಾಡಿ, search committee ಆ ರೀತಿ ಪಟ್ಟಿ ಕೊಡಬೇಕೆಂದು ಹೇಳಿದೆ. Vice chancellorಹುದ್ದೆ ತೆರವಾದಲ್ಲಿ ತಾತ್ಕಲಿಕವಾಗಿ ಆ ಹುದ್ದೆಯನ್ನು ತುಂಬು-

ವುದಕ್ಕೆ Chancellorಗೆ ಅಧಿಕಾರವಿದೆ.Chancellor ಜೊತೆಗೆ pro-chancellorರಿಗೂ ಅಧಿಕಾರ ಕೊಟ್ಟಿದೆ. Registrar ಹುದ್ದೆಗೆ ಮೊದಲ ಆದ್ಯತೆಯಾಗಿ IAS, IPS, senior scale KAS officers ನ್ನು ತೆಗೆದುಕೊಳ್ಳಬೇಕು. ಅವರ್ಯಾರೂ ಸಿಗದಿದ್ದ ಪಕ್ಷದಲ್ಲಿ ಮಾತ್ರprofessorಗಳಿಗೆ ಅವಕಾಶ ಕೊಡಬೇಕು. Registrar ಹುದ್ದೆ purely administration ಗೆ ಸಂಬಂಧಪಟ್ಟಿರುವುದು, Registrar (Evaluation) ಹುದ್ದೆ professor ಗಳಿಗೆ ಕೊಡಬೇಕು. ಏಕೆಂದರೆ, ಅವರಿಗೆ ಶಿಕ್ಷಣದ ಬಗ್ಗೆ ಆಳವಾದ ಅಧ್ಯಯನ ಇರಬೇಕಾದಅವಶ್ಯಕತೆಯಿದೆ. Registrar (Administration)ಗೆ ಮೊದಲ ಆದ್ಯತೆ IAS, IPS and senior KAS officersಈ ತರಹ ಇರುವವರಿಗೆ ಆದ್ಯತೆ ಕೊಡಬೇಕೆಂದು ಇದರೊಳಗೆ ಸೇರಿಸಿದೆ. syndicateನಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರನ್ನು ಸದಸ್ಯರಾಗಿ ಮಾಡಿದೆ, ಇದರ ಜೊತೆಗೆ ಇಬ್ಬರು MLA,ಒಬ್ಬರು MLCಯನ್ನು syndicate ನಲ್ಲಿ ಸದಸ್ಯರನ್ನಾಗಿ ಮಾನ್ಯ ಸಭಾಧ್ಯಕ್ಷರು ಮತ್ತು ಸಭಾಪತಿಗಳು ನೇಮಿಸುವುದಕ್ಕೆ ಅವಕಾಶ ಕೊಟ್ಟಿದೆ. ಇದರಲ್ಲಿ ವಿಶೇಷವೆಂದರೆ ಅವರು ಆuniversityಯವ್ಯಾಪ್ತಿಗೊಳ--ಪಟ್ಟಿರಬೇಕು. Mysore University ಎಂದರೆ Mysore University ಯವ್ಯಾಪ್ತಿಗೊಳ--ಪಟ್ಟಿರುವಂಥವರಾಗಿರಬೇಕು. Bangalore Universityಎಂದರೆ Bangalore University ವ್ಯಾಪ್ತಿಗೊಳಪಟ್ಟಿರು--ವಂಥವರಾಗಿರಬೇಕು. ಅಂದರೆ ಅಲ್ಲಿನ ಮತದಾರರ ಪಟ್ಟಿಯ ವ್ಯಾಪ್ತಿಯೊಳಗೆ, ಆ jurisdiction ವ್ಯಾಪ್ತಿಯೊಳಗೆ ವಾಸ ಮಾಡುತ್ತಿರುವವರಾಗಿರಬೇಕು. Technical universityಗೆ ಇಡೀ ರಾಜ್ಯದ ವ್ಯಾಪ್ತಿ ಇರುತ್ತದೆ. ಇದುtechnical university ಅಲ್ಲ, ಇದು general university. Inter university transferಗೆ ಅವಕಾಶ ಮಾಡಿದೆ. Transferಗೆ ಕೆಲವು ನಿಬಂಧನೆಗಳನ್ನು ಹಾಕಿದೆ. ನಾನು ಸಚಿವನಾದ ಮೇಲೆ ಎಲ್ಲಾ university ಗಳಿಗೆ ಒಂದು ಪ್ರದಕ್ಷಿಣೆ ಹಾಕಿ ಬಂದೆ. ಕೆಲವು ಕಡೆ students ಇಲ್ಲ, staff ಇದ್ದಾರೆ. ಅಲ್ಲಿ ಸುಮ್ಮನೆ ಸಂಬಳ ಕೊಡುತ್ತಿದ್ದೇವೆ. ಕೆಲವು ಕಡೆ studentts ಇದ್ದಾರೆ, staff ಇಲ್ಲ. ಈ ರೀತಿ ಎಲ್ಲೆಲ್ಲಿ ಸಮಸ್ಯೆಯಿದೆ ಇದನ್ನು ಪರಿಶೀಲಿಸಿ ಅಂತರ ವಿಶ್ವವಿದ್ಯಾಲಯ transfer ಗೆ ಅವಕಾಶ ಮಾಡಿದೆ. ಅದಕ್ಕೆ ಕೆಲವು

ನಿಬಂಧನೆಗಳನ್ನು ಹಾಕಿ transfer ಮಾಡುವುದು. Transfer ಮಾಡುವುದಕ್ಕೆ establishment board ಅನ್ನು ಮಾಡಿ, ಅದರಲ್ಲಿ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರು, ಉನ್ನತ ಶಿಕ್ಷಣ ಪರಿಷತ್‌ನವರು ಉಪಾಧ್ಯಕ್ಷರು, ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಕುಲಪತಿಗಳು ಸದಸ್ಯರು, ಇವರನ್ನೊಳಗೊಂಡಂಥ ಒಂದುboard Governmentಗೆ recommendಮಾಡುತ್ತದೆ. ಯಾರನ್ನು transfer ಮಾಡಬಹುದು, ಮಾಡಿದರೂ ಏಕೆ ಮಾಡಬೇಕೆಂದು ವಿವರವಾಗಿ recommend ಮಾಡಿ ಕಳುಹಿಸಿದ ಮೇಲೆ ಅದನ್ನು ಪರಿಶೀಲಿಸಿ government transfer ಮಾಡುವಂಥ ವ್ಯವಸ್ಥೆ ಮಾಡಿದೆ. ಹತ್ತು ವಿದ್ಯಾರ್ಥಿಗಳಿಗಿಂತ ಕಡಿಮೆ ಇದ್ದರೆ ಆcourseಅನ್ನು ಇನ್ನೊಂದು universityಗೆ transfer ಮಾಡಿ ಆ ವಿದ್ಯಾರ್ಥಿಗಳಿಗೆ ಮುಕ್ತವಾಗಿ ಯಾವುದೇ ವಿಶ್ವವಿದ್ಯಾಲಯದಲ್ಲಿ admission ಆಗುವುದಕ್ಕೆ ಅವಕಾಶ ಮಾಡಿ ಕೊಟ್ಟಿದೆ. ಈಗ ಏನಿದೆ ಎಂದರೆ, ಕೇವಲ 2%, 5% ಮಾತ್ರ ಅವರ jurisdiction ನಿಂದ ಇನ್ನೊಂದು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು admission ಆಗಬಹುದು. ಉದಾಹರಣೆಗೆ: marine technology ನಮ್ಮ ರಾಜ್ಯದಲ್ಲಿ ಎಲ್ಲೋ ಒಂದುಕಡೆಗೆ ಇದ್ದರೆ ಸಾಕು. ಗುಲ್ಬರ್ಗಾದಲ್ಲಿ ಇರುತ್ತದೆ, ಮಂಗಳೂರಿನಲ್ಲಿ ಇರುತ್ತದೆ, ಈ ರೀತಿ ಆಗಬಾರದು, ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಲ್ಲಿರುತ್ತಾರೆ, ಅನಗತ್ಯ ವೆಚ್ಚವಾಗುತ್ತದೆ, ಈ ಅನಗತ್ಯ ವೆಚ್ಚ ತಪ್ಪಿಸುವುದಕ್ಕೆ ಅವುಗಳನ್ನು pool ಮಾಡುವಂಥ ವ್ಯವಸ್ಥೆ. ಒಂದೊಂದು ವಿಶ್ವವಿದ್ಯಾಲಯ ಒಂದೊಂದು ವಿಷಯದೊಳಗೆ expertise ಆಗಬೇಕೆನ್ನುವ ಕಲ್ಪನೆಯನ್ನಿಟ್ಟುಕೊಂಡು, ಶ್ರೀ ಸ್ಯಾಮ್ ಪಿತ್ರೋಡಾರವರೂ ಕೂಡ ಒಂದೊಂದು ವಿಶ್ವವಿದ್ಯಾಲಯ ಒಂದೆರಡು ವಿಷಯದೊಳಗೆexpertiseಆಗಬೇಕೆನ್ನುವ ವರದಿ ಕೊಟ್ಟಿದ್ದರು. ಅವರ ಕಲ್ಪನೆಯಂತೆ ಈ ತಿದ್ದುಪಡಿ ಮಾಡಿದೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ):– ಮಾನ್ಯ ಅಧ್ಯಕ್ಷರೆ, University main Actಗೆ ನೀವು ಇಷ್ಟೊಂದು amendment ತಂದರೆ ಇನ್ನು ಆ Actಗೆ ಸ್ವಾರಸ್ಯ ಇರುವುದಿಲ್ಲ. ನಾನು ತರುವುದು ಬೇಡವೆಂದಲ್ಲ. ತಿದ್ದುಪಡಿ ತರಬೇಕಾದಾಗ ಮುಖ್ಯವಾದ ಪ್ರೇರಣೆ ಏನು? ಅಥವಾ University Act ನಲ್ಲಿ

ಈ ರೀತಿಯಾಗಿ Vice Chancellor meetingನಲ್ಲೋ ಅಥವಾ ಯಾವುದಾದರೂ ಸಂದರ್ಭದಲ್ಲಿ ಈ ರೀತಿಯಾದ ಬದಲಾವಣೆಗಳು ಬೇಕೆಂದು ಸರ್ಕಾರಕ್ಕೆ ಅನ್ನಿಸಿದ್ದು ಯಾವಾಗ? ಆ ತರಹ ನಿಮ್ಮ ಹತ್ತಿರ ಏನಾದರೂ ವರದಿ ಇದೆಯೆ? ಆ ವರದಿಯ ಹಿನ್ನೆಲೆಯಲ್ಲಿ ಇದನ್ನು ತಂದಿದ್ದೀರಾ? ಏಕೆಂದರೆ ಅದೊಂದು ಪ್ರಶ್ನೆ ಬರುತ್ತದೆ. ಮಾನ್ಯ ಶಿವಕುಮಾರ್‌ರವರು ನನ್ನ ಕಿವಿಯಲ್ಲಿ ಇದು ರಾಜ್ಯಪಾಲರ ಹತ್ತಿರ ಹೋದರೆ ವಾಪಸ್ ಬರುತ್ತದೆ ಎಂದು ಹೇಳುತ್ತಿದ್ದರು. ಹಾಗಾಗಬಾರದು ಎನ್ನುವ ಕಾರಣಕ್ಕೋಸ್ಕರ ನಾನು ಕೇಳಿದೆ, ಇದಕ್ಕೆ ಏನು ಪ್ರೇರಣೆ? ಅದು ಎಲ್ಲೋ ಒಂದು ಕಡೆಗೆ chancellor powers ಅನ್ನು curtail ಮಾಡಿದ ಹಾಗೆ ಆಗುತ್ತದೆಯೇ? ಆಮೇಲೆ ಆ university ಗೆ ಇರುವ ಘನತೆ, ಮಾನ್ಯತೆ, ಎಲ್ಲಾದರೂ dilute ಆಗುತ್ತದೆಯೆ ಎನ್ನತಕ್ಕಂಥ ಅನುಮಾನ.

ಶ್ರೀ ಬಂಡೆಪ್ಪ ಖಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಇದರಲ್ಲಿ ಸಾಕಷ್ಟು ತಿದ್ದುಪಡಿಗಳನ್ನು ತಂದಿದ್ದಾರೆ. ವಿಶೇಷವಾಗಿ ತನಿಖೆ ಮಾಡುವುದು, ನಾನೂ ಕೂಡ ಕೃಷಿ ಮಂತ್ರಿಯಾಗಿ ಕೃಷಿ ಯೂನಿವರ್ಸಿಟಿಗಳ ಬಗ್ಗೆ ತಿಳಿದಿದ್ದೇನೆ. ಸರ್ಕಾರ ಮಾಡುವ ಕೆಲಸಗಳು ಬಹಳ ಇವೆ. ಮತ್ತೆ ಅದರಲ್ಲಿ ನಾವು interfere ಆಗಿ ಅವರ ಅಧಿಕಾರ ತೆಗೆದುಕೊಂಡು ಮೂರು ತಿಂಗಳಲ್ಲಿ ಮಾಡುವುದು, ಇದು ಎಲ್ಲೋ ಒಂದು ಕಡೆಗೆ ನನಗೆ wrong ಎಂದೆನ್ನಿಸುತ್ತದೆ. ಏಕೆಂದರೆ, ನಾವೆಲ್ಲಾ as a pro-chancellor limitation ನಲ್ಲಿಕೆಲಸ ಮಾಡಿಕೊಂಡು, ಅವರ ಪಾಡಿಗೆ ಅವರು ಅದೊಂದು autonomous ಇದ್ದಹಾಗೆ. ಎಲ್ಲಾ universityಗಳು autonomous ಆಗಿರುತ್ತವೆ. ಸರ್ಕಾರದ ಹಸ್ತಕ್ಷೇಪ ಬಹಳ ಕಡಿಮೆ. ನಾವು ಯಾವುದಾದರೂ VC ಗಳಿಗೆ ಮಾತನಾಡಬೇಕಾದರೆ ಇದನ್ನು ಏನು ಮಾಡುತ್ತೀರಿ ನೋಡಿ ಎಂದು ನಾವು ಹೇಳಬೇಕಾಗುತ್ತದೆ, ಏಕೆಂದರೆ ಇದು ಅವರ ವ್ಯಾಪ್ತಿಯೊಳಗೆ ಬರುತ್ತದೆ. ಇದರಲ್ಲಿ ಎಲ್ಲೋ ಒಂದು ಕಡೆಗೆ ಸರ್ಕಾರ ಆ university ಗಳಮೇಲೆ ನಿಯಂತ್ರಣ ಮಾಡುವಂಥ ಒಂದು ಪ್ರಯತ್ನ ನಡೆಯುತ್ತದೆಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳಿಗೆ ಸರ್ಕಾರದ system ನಲ್ಲಿ ಇಡೀ ರಾಜ್ಯಾದ್ಯಂತ ಬಹಳಷ್ಟು ಕೆಲಸ ಮಾಡುವುದು ಇರುತ್ತದೆ. ಘನತೆವೆತ್ತ ಗೌವರ್ನರ್‌ರವರು Chancellor ಇರುತ್ತಾರೆ, ಅವರ

appointment ನಲ್ಲಿ ನಮ್ಮದು ಇದೆ. ಸರ್ಕಾರ ಸಮಾಲೋಚನೆ ಮಾಡಿ ಇವರು ಕಳುಹಿಸಿದಂಥ 3 recommendations ನಲ್ಲಿಯೇ ಅವರು ಮಾಡಬೇಕು. Search committee membersಇವರು ಎಲ್ಲಾ ಸೇರಿಕೊಂಡು ಮಾಡುತ್ತಾರೆ. ಮತ್ತೆ ಅದರಲ್ಲಿ ಇವರು compulsory ಮಾಡಿದರೆ ಅದಕ್ಕೂ ಒಂದು ರೀತಿಯಲ್ಲಿ ಅವರ powersಗೂ curtail ಆಗುತ್ತದೆ. Appointment of Registrarsನಲ್ಲಿ ಒಬ್ಬರು ಸಿಗಲಿಲ್ಲವೆಂದರೆ ಇನ್ನೊಬ್ಬರನ್ನು ಮಾಡುವುದು, ಅದು ಬೇರೆ ಮಾತು. MLA, MLC appointment ಅದು ಸ್ಥಳೀಯವಾಗಿ ಮಾಡುತ್ತೀರಿ ಅದಕ್ಕೇನೂ ತೊಂದರೆ–ಯಿಲ್ಲ. ಹೀಗಾಗಿ ಎಲ್ಲೋ ಒಂದು ಕಡೆಗೆ ನೀವುenquiryಗೆ ಸರ್ಕಾರದ levelನಲ್ಲಿ ಏನು ತರುತ್ತಿದ್ದಿರಿ, ಆಮೇಲೆVice Chancellor appointment ನಲ್ಲಿಸರ್ಕಾರದ ಸಮ್ಮತಿ ಬೇಕೆಂದು ಹೇಳಿದಿರಿ, ಹೀಗಾಗಿ ಸರ್ಕಾರಕ್ಕೂ ಸ್ವಲ್ಪ ತೊಂದರೆಯಾಗುತ್ತದೆ. ಆ ಒಂದು systemನಲ್ಲಿ ಅಧಿಕಾರಿಗಳು ಮಾಡಬೇಕಾ–ದಾಗ ಇದೊಂದು ಸ್ವಲ್ಪ ನೀವು ಗಮನಹರಿಸಬೇಕು, ಮತ್ತೆChancellor powerಅನ್ನು ಕಿತ್ತುಕೊಂಡರು ಎಂದು ಅನ್ನಿಸಬಾರದು. ನಿನ್ನೆ ನಾವೊಂದು ಪಾಸ್ ಮಾಡಿ ಕಳುಹಿಸಿದೆವು ಅದು ಪುನಃ ವಾಪಸ್ ಬಂತು. ಮತ್ತೆ ಇದು ವಾಪಸ್ ಬರಬಾರದು. ಏಕೆಂದರೆ, ಇದರಲ್ಲಿ ಏಕೆ ಕೈ ಹಾಕಿ ಇದನ್ನು ಮಾಡುತ್ತಿದ್ದಿರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿ.ಟಿ. ರವಿ:– ನೀವು ಹೇಳಿದ ಹಾಗೆ ಪ್ರೇರಣೆಗೆ ಕಾರಣವಿದೆ. ನಾನು ಮುಂಚೆ ಅಂತರ ವಿಶ್ವವಿದ್ಯಾಲಯಗಳ ವರ್ಗಾವಣೆಯ ಬಗ್ಗೆ ಹೇಳದೆ. ಅನಗತ್ಯವಾಗಿ ಸರ್ಕಾರಕ್ಕೆ ಹೊರೆಯಾಗುತ್ತಿದೆ ಎಂದು ಹೇಳಿದೆ. ಇದರಲ್ಲಿenquiryಗೆ ಕಾರಣ ಏನೆಂದರೆ, ನಿರಂತರವಾಗಿ.,

ಶ್ರೀ ಡಿ.ಕೆ.ಶಿವಕುಮಾರ್: ತಾವು ಕೆಲವು ಒಳ್ಳೆಯದನ್ನು ತಂದಿದ್ದೀರಿ. ಕೆಲವುದರಲ್ಲಿ ಸ್ವಲ್ಪ positive ಇದೆ. ಮಿಕ್ಕದ್ದು ಅವರು ಹೇಳಿದ ಹಾಗೆ ಸ್ವಲ್ಪ government control ಆಗುವಂಥ ಸಂದರ್ಭ ಕಾಣುತ್ತದೆ. ನೀವು ಏನು ಕಷ್ಟಪಟ್ಟು ಬಹಳ ತಲೆಕೆಡಿಸಿಕೊಂಡು ಈ ಬಿಲ್ ಏನು ತಂದಿದ್ದೀರಿ ಅದು ಮತ್ತೆ ವಾಪಸ್ ಬರಬಾರದು. ಅದಕ್ಕೆ ಈಗಲಾದರೂ ನೋಡಿ ಅದಕ್ಕೆ amendment ತಂದು ಎರಡು ಭಾಗ ಮಾಡಿ, ಯಾವುದು ವಾಪಸ್ ಬರಬೇಕು ಯಾವುದು

ಮಾಡಬೇಕು ಎಂದು ಎರಡು ಭಾಗ ಮಾಡಿ ನೋಡಿ. ಅಧಿಕಾರ ಬಿಡುತ್ತಾರಾ, ಸ್ವಾಮಿ?

ಶ್ರೀ ಸಿ.ಟಿ.ರವಿ:– ಮಾನ್ಯ ಅಧ್ಯಕ್ಷರೆ, ಈ ಬಿಲ್ ಕೌನ್ಸಿಲ್‌ನಲ್ಲಿ ಚರ್ಚೆಯಾಗಿ ಕೆಲವೊಂದು ತಿದ್ದುಪಡಿಯಾಗಿ ಸರ್ವಾನುಮತದಿಂದ ಅಂಗೀಕಾರವಾಗಿ ಬಂದಿದೆ. ಪ್ರಜಾಪ್ರಭುತ್ವದಲ್ಲಿ ಚುನಾಯಿತ ಸರ್ಕಾರವೇ ಅಂತಿಮ. ಈ ಸಭೆಯ ಮೂಲಕವೇ ಯಾರಿಗಾದರೂ ಪವರ್ ಕೊಡುವುದಕ್ಕೆ ಸಾಧ್ಯ. ಈ ಸಭೆಯೇ ಗೌರವಾನ್ವಿತ ರಾಜ್ಯಪಾಲರಿಗೂ ಸಹ ಅಧಿಕಾರ ಕೊಟ್ಟಿದೆ. ಆದ್ದರಿಂದ, ಈ ಸಭೆಗೆ ಹೊರತಾಗಿರುವಂಥದ್ದು ಯಾವುದೂ ಸಹ ಇಲ್ಲ. ಇದನ್ನು ಏಕೆ ತರಬೇಕಾಗಿತ್ತೆಂದರೆ, ಕಳೆದ ಒಂದೂವರೆ ವರ್ಷಗಳಿಂದ ನಿರಂತರವಾಗಿ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಹಗರಣಗಳ ಮೇಲೆ ಹಗರಣಗಳು ಬರುತ್ತಿರುವುದನ್ನು ನಾವೆಲ್ಲರೂ ಸಹ ನೋಡಿದ್ದೇವೆ. ಅಂಥ ಸಂದರ್ಭದಲ್ಲಿ ನಾವು ಏನು ಮಾಡುವುದಕ್ಕೆ ಸಾಧ್ಯವಾಯಿತು? ಆಗ ಸರ್ಕಾರ ಕೇವಲ ಪೋಸ್ಟ್‌ಮ್ಯಾನ್ ಕೆಲಸ ಮಾಡುವಂಥದ್ದು ಮಾತ್ರ ಆಗಿತ್ತು. ಜನರ ಮೇಲೆ ಬದ್ಧತೆ ಇಟ್ಟುಕೊಳ್ಳಬೇಕಾಗಿರತಕ್ಕಂಥ ಒಂದು ಚುನಾಯಿತವಾದಂಥ ಸರ್ಕಾರ, ಅದು ಯಾವುದೇ ಸರ್ಕಾರ ಇರಬಹುದು, ಅಂದರೆ, ಇವತ್ತು ಬಿಜೆಪಿ ಇರಬಹುದು ಅಥವಾ ನಾಳೆ ದಿವಸ ಇನ್ನೊಂದು ಪಾರ್ಟಿಯ ಸರ್ಕಾರ ಬರಬಹುದು.

ಶ್ರೀ ಡಿ.ಕೆ.ಶಿವಕುಮಾರ್:– ಮುಂದೆ ಕಾಂಗ್ರೆಸ್ ಸರ್ಕಾರ ಬರುತ್ತದೆ.

ಶ್ರೀ ಸಿ.ಟಿ.ರವಿ:– ಮತ್ತೆ ಬಿಜೆಪಿ ಸರ್ಕಾರವೇ ಬರಬಹುದು. ಆದರೆ, ಯಾವುದೇ ಸರ್ಕಾರಇಂಥ ವಿಷಯಗಳಲ್ಲಿ ಅಸಹಾಯಕವಾಗಬಾರದು. ಅದಕ್ಕೋಸ್ಕರ ಮಾನ್ಯ ರಾಜ್ಯಪಾಲರ ಗೌರವವನ್ನೂ ಸಹ ಕಾಪಾಡಿಕೊಂಡಿದ್ದೇವೆ. ಹಾಗೆಯೇಸರ್ಕಾರ ಅಸಹಾಯಕವಾಗಬಾರದು ಮತ್ತು ಜನರಿಗೆ ತಕ್ಷಣ ಸ್ಪಂದಿಸುವಂಥ ವ್ಯವಸ್ಥೆ ಆಗದೇ ಹೋದರೆ ಯಾರೂ ಸಹ ಮಾನ್ಯ ರಾಜ್ಯಪಾಲರನ್ನು ದೂರುವುದಿಲ್ಲ. ಇಲ್ಲಿ ಯಾರು ಆಡಳಿತ ನಡೆಸುತ್ತಿರುತ್ತಾರೆಯೋ ಅವರನ್ನು ದೂರುತ್ತಾರೆ. ಆದರೆ, ಇಡೀ ಆಕ್ಟ್ ಅನ್ನು ತೆಗೆದು ನೋಡಿದರೆ ಆಕ್ಟ್‌ನಲ್ಲಿ ನಾವೇ ನಮ್ಮ ಕೈಯಲ್ಲಿ ಕಟ್ಟಿ ಹಾಕಿಕೊಂಡಿದ್ದೇವೆ. ಯೂನಿವರ್ಸಿಟಿಗಳಿಗೆ ಸ್ವಾಯತ್ತತೆ ಇರಲ್ಲೆಂದು ಅವತ್ತಿನದಿವಸ ಈ ಆಕ್ಟ್ ಅನ್ನು ಮಾಡುವಾಗ ಅಲೋಚನೆ ಮಾಡಿರುವಂಥದ್ದು ಸರಿ ಇದೆ. ಆದರೆ, ಅಲ್ಲಿ ಬಂದು ಕುಳಿತವರು ಏನೇನು ಮಾಡಿದರು, ಹೇಗೇಗೆ ಆಯಿತೆಂದು ಮತ್ತು ಯಾವ್ಯಾವ ವಿಶ್ವವಿದ್ಯಾಲಯಗಳಲ್ಲಿ ಏನೇನು ಹಗರಣಗಳು ಬಂದವೆಂದು ತಾವು

ನೋಡಿದ್ದೀರಿ. ಇದರ ಆಧಾರದ ಹಿನ್ನೆಲೆಯಲ್ಲಿ ಮತ್ತು ಕಾಲದ ಅವಶ್ಯಕತೆಗೆ ಅನುಗುಣವಾಗಿ ಈ ಬದಲಾವಣೆಯನ್ನು ತಂದಿದ್ದೇವೆ. ಮಾನ್ಯ ರಾಜ್ಯಪಾಲರು ವಾಪಸ್ಸು ಕಳುಹಿಸಿದರೆ ಮತ್ತೆ ಇದೇ ಸದನದಲ್ಲಿ ಅಪ್ರೂವಲ್ ಮಾಡಿ ಕಳುಹಿಸುವ ಅಧಿಕಾರ ಇದೆ. ಜನರ ಹಿತಾಸಕ್ತಿಯನ್ನು ರಕ್ಷಣೆ ಮಾಡತಕ್ಕಂಥ ಬಿಲ್ ಅನ್ನು ಈ ಸಭೆ ತೀರ್ಮಾನ ಮಾಡಿ ಕಳುಹಿಸಿದ ಮೇಲೆ ಮಾನ್ಯ ರಾಜ್ಯಪಾಲರು ಮತ್ತೆ ವಾಪಸ್ಸು ಕಳುಹಿಸಬಾರದು. ಆಕಸ್ಮಾತ್ ಕಳುಹಿಸಿದರೆ ಸಂವಿಧಾನ ಮತ್ತು ಕಾನೂನಿನಲ್ಲಿ ಅವಕಾಶ ಇರುವಂತೆ ಮತ್ತೆ ಇಲ್ಲಿ ಪಾಸ್ ಮಾಡಿ ಕಳುಹಿಸಬೇಕು. ಯಾರೊಬ್ಬರ ಅಧಿಕಾರತಾಣಕ್ಕೋಸ್ಕರ ನಾವು ಯೋಚನೆ ಮಾಡುವುದಲ್ಲ. ಜನರಿಗೆ ಉತ್ತರ ಕೊಡುವಂಥ ಬದ್ಧತೆ ನಮಗೆ ಇದೆ. ಆದ್ದರಿಂದ ಇವತ್ತಿನ ಪರಿಸ್ಥಿತಿಗೆ ಅನುಗುಣವಾಗಿ ಅನಿವಾರ್ಯವಾಗಿ ಈ ಬಿಲ್ ಅನ್ನು ತಂದಿದ್ದೇವೆ. ಈ ಬಿಲ್ ಅನ್ನು ತರಬೇಕಾದರೆ ಸಾಕಷ್ಟು ಶಿಕ್ಷಣ ತಜ್ಞರ ಜೊತೆ ಸಮಾಲೋಚನೆ ಮಾಡಿದ್ದೇನೆ. ಏಕೆಂದರೆ, ನಾನೇನು ಶಿಕ್ಷಣ ತಜ್ಞ ಅಲ್ಲ. ಏನೇನು ಮಾಡಿದರೆ ಏನು ಆಗುತ್ತದೆಂಬ ಸಾಧಕಬಾಧಕಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಇದನ್ನು ತರಲಾಗಿದೆ. ಆದ್ದರಿಂದ, ಇದನ್ನು ಅಂಗೀಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಿದ್ದಾರೆ. ಆದರೆ, ಎಲ್ಲಿಯೋ ಒಂದು ಕಡೆ power ಅನ್ನು curtail ಮಾಡಿದ್ದಾರೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ದಾಖಲೆಗೆ ಹೋಗಬಾರದು. ಇಲ್ಲಿ ಸರ್ಕಾರಕ್ಕೆ ಪವರ್‌ಅನ್ನು ಕ್ರಿಯೇಟ್ ಮಾಡಿದ್ದೇವೆ. ಆದರೆ, ಅವರ ಪವರ್‌ಅನ್ನು withdraw ಮಾಡಿಕೊಂಡಿಲ್ಲ. ಆದ್ದರಿಂದ, ತಾವು ಹೇಳಿರುವುದು ತಪ್ಪು. ತಾವು ಅಧ್ಯಯನ ಮಾಡದೆ ಸುಮ್ಮನೆ ಹೇಳುತ್ತಿದ್ದೀರಿ. ನಾವು ಪವರ್‌ಅನ್ನು ಕ್ರಿಯೇಟ್ ಮಾಡಿದ್ದೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಮಾನ್ಯ ಸಚಿವರೆ, ನಾವು ಹೇಳುವುದನ್ನು ಕೇಳಿ. ಹಿಂದೆ ಬಿಲ್ ಪಾಸ್ ಮಾಡುತ್ತಿದ್ದಾಗ ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ. ಸುಮ್ಮನೆ ಮಾತನಾಡುತ್ತಿದ್ದಾರೆಂದು ತಾವು ಹೇಳುವುದು ಸರಿಯಲ್ಲ. Floor Leader ಆಗಿ ನಾನೂ ಸಹ ಕೆಲಸ ಮಾಡಿದ್ದೇನೆ. ಆ ರೀತಿಯಾಗಿ ತಾವು ಮಾತನಾಡಬೇಡಿ.

ಶ್ರೀ ಸಿ.ಟಿ.ರವಿ:– ಮಾನ್ಯ ಅಧ್ಯಕ್ಷರೆ, ಅಧಿಕಾರವನ್ನು ನಾವು ಇಲ್ಲಿ curtail ಮಾಡಿಲ್ಲ. ನಿಮ್ಮ ತಪ್ಪು ಮಾಹಿತಿ ದಾಖಲೆಗೆ ಹೋಗಬಾರದು. ನಾವು curtail ಮಾಡಿಲ್ಲ, create ಮಾಡಿದ್ದೇವೆ, create ಬೇರೆ, curtail ಬೇರೆ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಇಷ್ಟು ವರ್ಷಗಳವರೆಗೆ ನಡೆಕೊಂಡು ಬಂದಾಗ ಇವರಿಗೆ ಸಮಸ್ಯೆ ಆಗಲಿಲ್ಲ. ಈಗ ಇವರು ಮನೆಗೆ ಹೋಗುವಂಥ ಸಂದರ್ಭದಲ್ಲಿ ಈ ಸಮಸ್ಯೆ ಬಂತೇ? 5 ವರ್ಷಗಳಲ್ಲಿ ಇದನ್ನು ಏಕೆ ಮಾಡಲಿಲ್ಲ?

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ರಾಜ್ಯಕ್ಕೆ ಒಳ್ಳೆಯದಾಗಬೇಕೆಂದು ನಾವು ಯೋಚನೆ ಮಾಡಿದ್ದೇವೆ. ನನಗೆ ಇದರಿಂದ ಏನೂ ಆಗಬೇಕಾಗಿಲ್ಲ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಮಾನ್ಯ ಅಧ್ಯಕ್ಷರೆ, ಇವರು 5 ವರ್ಷಗಳವರೆಗೆ ಸುಮ್ಮನೆ ಇದ್ದರು. ಒಂದು ವೇಳೆ ಇವರಿಗೆ ಬದ್ಧತೆ ಇದ್ದಿದ್ದರೆ ಒಂದೇ ವರ್ಷದಲ್ಲಿ ತಿದ್ದುಪಡಿ ತರಬೇಕಾಗಿತ್ತು. ಏಕೆಂದರೆ, ಅಲ್ಲಿ ಸರ್ಕಾರದವರು ಸಂಪೂರ್ಣವಾಗಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಅಲ್ಲಿ competition ನಡೆಯುತ್ತಿದೆ. ಅಂದರೆ, ಯಾವುದೇ ವಿಶ್ವವಿದ್ಯಾಲಯದ V.C. appointment ಆಗಲಿ ಅಥವಾ ಇನ್ನೊಂದಾಗಲಿ ನಮ್ಮದು ಮಾಡಬೇಕೆಂದು ಇವರು ಮತ್ತು ನಮ್ಮದು ಮಾಡಬೇಕೆಂದು ಅವರು, ಈ ರೀತಿಯಾಗಿ ಹೊರಗಡೆ ಬಹಳಷ್ಟು ಚರ್ಚೆಯಾಗಿದೆ. ಆದರೆ, ಇಲ್ಲಿ ಏನಾಗಿದೆ ಎಂದರೆ, ಎಲ್ಲೋ ಒಂದು ಕಡೆ ಸರ್ಕಾರ ಸಂಪೂರ್ಣವಾಗಿ ನಿಯಂತ್ರಣ ಇಟ್ಟುಕೊಂಡಿದೆ. ಕೆಲವು ಸಂದರ್ಭಗಳಲ್ಲಿ ಅಮೆಂಡ್‌ಮೆಂಟ್‌ಗಳನ್ನು ಮಾಡಲಾಗುತ್ತದೆ. ಆದರೆ, ಅದಕ್ಕೆ autonomy ಕೊಟ್ಟು ಅದಕ್ಕೊಂದು ಗೌರವ ಕೊಡತಕ್ಕಂಥ ಒಂದು ಪದ್ಧತಿ ಇದೆ. ಹಿಂದೆ ಈ ಬಿಲ್ ಅನ್ನು ಮಾಡಿದಂಥವರು ತಪ್ಪು ಮಾಡಿದ್ದಾರೆಯೇ? ಅವರಿಗೆ ಅನುಭವ ಇರಲಿಲ್ಲವೇ? ನಾವು ಇದ್ದಂಥ ಸಂದರ್ಭದಲ್ಲಿ ಎರಡು–ಮೂರು ವಿಶ್ವವಿದ್ಯಾಲಯಗಳಿಗೆ ವಿ.ಸಿ.ಗಳನ್ನು ನೇಮಕ ಮಾಡಿದ್ದೆವು ಆಗ ಏನೂ ಆಗಲಿಲ್ಲ.

ಶ್ರೀ ಸಿ.ಟಿ.ರವಿ:– ಈ ರೀತಿಯಾಗಿ ತನಿಖೆ ನಡೆಸಬೇಕೆಂದು ಹೇಳುವುದರಲ್ಲಿ ಯಾವ ದೋಷ ಇದೆ ಹೇಳಿ?

ಶ್ರೀ ಬಂಡೆಪ್ಪ ಖಾಶೆಂಪೂರ್:– ದೋಷ ಇಲ್ಲ. ಆದರೆ, ಅದೊಂದು autonomous body ಮತ್ತು ಅದು purely professional ಆಗಿದೆ.

ಶ್ರೀ ಸಿ.ಟಿ.ರವಿ:– ತನಖೆ ಮಾಡುವುದು ಜಡ್ಜ್. ಆದ್ದರಿಂದ, ಇದರಲ್ಲಿ ದೋಷ ಎಲ್ಲಿದೆ ಹೇಳಿ?

ಶ್ರೀ ಬಂಡೆಪ್ಪ ಖಾಶೆಂಪೂರ್:– ದೋಷ ಇಲ್ಲ.

ಅಧ್ಯಕ್ಷರು:– ದೋಷ ಇಲ್ಲವೆಂದು ತಾವೇ ಹೇಳುತ್ತಿದ್ದೀರಿ. ಆದ್ದರಿಂದ, ಈ ಬಿಲ್ ಅನ್ನು ಪಾಸ್ ಮಾಡೋಣ.

ಶ್ರೀ ಸಿ.ಟಿ. ರವಿ:– ದೋಷ ಎಲ್ಲಿದೆ ಹೇಳಿ?

ಶ್ರೀ ಬಂಡೆಪ್ಪ ಖಾಶೆಂಪೂರ್:– ಮಾನ್ಯ ಅಧ್ಯಕ್ಷರೆ, University ಮತ್ತು ಕೆಲವು Boardಗಳೆಲ್ಲವು ಒಂದು professionalism team ಇದ್ದ ಹಾಗೆ. ಆದ್ದರಿಂದ, ನಮ್ಮ ಸರ್ಕಾರದಲ್ಲಿರುವ ಅಧಿಕಾರಿಗಳನ್ನು ಅಲ್ಲಿ ಕೂರಿಸುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್.ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಮತ್ತು ಮಾನ್ಯ ಜಯಚಂದ್ರರವರು ಹಾಗೂ ಮಾನ್ಯ ಬಂಡೆಪ್ಪ ಖಾಶೆಂಪೂರ್‌ವರು ಒಂದು valid pointಅನ್ನು ಪ್ರಸ್ತಾಪ ಮಾಡಿದ್ದೀರಿ. ನಾನು ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಬಯಸುತ್ತೇನೆ. ನಾನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಓದಿದ್ದೇನೆ. ಮಾನ್ಯ ಹೆಚ್.ನರಸಿಂಹಯ್ಯನರು Vice Chancellorಇದ್ದಂಥ ಸಂದರ್ಭದಲ್ಲಿ ನಾನು ಓದಿದ್ದೇನೆಂಬ ಒಂದು ಸಮಾಧಾನ ಮತ್ತು ತೃಪ್ತಿ, ಹೆಮ್ಮೆ ನನಗೆ ಇದೆ. ನಾನು ಆ ಯೂನಿವರ್ಸಿಟಿ ಹೆಸರು ಹೇಳಬಹುದೋ ಅಥವಾ ಬೇಡವೋ ಗೊತ್ತಿಲ್ಲ. ಆದರೆ, ಇವತ್ತಿನದಿವಸspecificಆಗಿ ಏನಾಗಿತ್ತೆಂದರೆ, ಕಳೆದ ವರ್ಷ ಪೂರ್ತಿಯಾಗಿ Bangalore University was in news for wrong reasons. Registrar ಮತ್ತೆ Vice Chancellor ನಡುವೆ ಯಾವ್ಯಾವ ರೀತಿ ಆಯಿತ್ತೆಂಬುದನ್ನು ನಾವೆಲ್ಲರೂ ಸಹ ನೋಡಿದ್ದೇವೆ. ಅಲ್ಲಿದಂಥ Vice Chancellor ರವರಿಗೆ ಒಂದು ಮಾತನ್ನು ಕೇಳಿದ್ದೆ. ಏಕೆಂದರೆ, he was supposed to be a very good heart surgeon. Bangalore Universityಯ heart ಹೇಗಿದೆ ಎಂದು ನಾನು

ಕೇಳಿದಾಗ ಈಗ ಸ್ವಲ್ಪproblemಇದೆಎಂದು ಅವರು ಹೇಳಿದ್ದರು. ಅಲ್ಲಿನ ಬಗ್ಗೆ ದೂರಿನ ಮೇಲೆ ದೂರು ಬಂದಾಗ ನಾನು ಮತ್ತು ಮಾನ್ಯ ಸಿ.ಟಿ.ರವಿಯವರು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿನ ಪರಿಸ್ಥಿತಿ ನೋಡಿ ಹೌಹಾರಿಬಿಟ್ಟೆವು. ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತ್ತೆಂಬ ಹಾಗೆ ಯೂನಿವರ್ಸಿಟಿಯ ಹಾಸ್ಟೆಲ್‌ನಿಂದ ಹಿಡಿದು ಮತ್ತು ಅಲ್ಲಿನstaffಮತ್ತು Lecturerನಡುವಿನ ಸಂಬಂಧ ಒಂದು ರೀತಿಯಲ್ಲಿ ನರಕವಾಗಿತ್ತು. ಈ ರೀತಿಯಾದಾಗ ಏನು ಮಾಡುವುದಕ್ಕೆ ಸಾಧ್ಯ? ನಾವು maximum ಕೇವಲ counseling ಮಾಡಬಹುದಷ್ಟೆ. ಅಂದರೆ, Registrar ಮತ್ತು Vice-Chancellorರವನ್ನು ಕೂರಿಸಿಕೊಂಡು ಈ ರೀತಿ ಮಾಡಿದರೆ ಸರಿ ಹೋಗುವುದಿಲ್ಲವೆಂದು ಹೇಳಿದೆವು. ಮಾನ್ಯ ಬಂಡೆಪ್ಪ ಖಾಶೆಂಪೂರ್‌ರವರೆ, ನಾನು ಹೇಳುವುದೇನೆಂದರೆ, ಯಾವುದೋ ಒಂದು ದುರುದ್ದೇಶದಿಂದ ಅಧಿಕಾರ ಕಿತ್ತುಕೊಳ್ಳುವುದಕ್ಕೆ ಖಂಡಿತ ಮಾಡಿದ್ದಲ್ಲ. In the interest of the university and the University autonomyಗೆ ಕೈ ಹಾಕುತ್ತಿಲ್ಲ. Vice-chancellor ಅನ್ನು ನೇಮಕ ಮಾಡುವುದಕ್ಕೆ ಏನಾದರು ಹೋಗುತ್ತಿದ್ದೇವೆಯೇ? ಇದನ್ನು ಮಾಡುತ್ತಿಲ್ಲ.

ಶ್ರೀ ಬಂಡೆಪ್ಪ ಖಾಶೆಂಪೂರ್:– ಅದನ್ನು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಎಸ್.ಸುರೇಶ್ ಕುಮಾರ್:– ಖಂಡಿತ ಅದು ಇಲ್ಲ. ಅದಕ್ಕೋಸ್ಕರclarifyಮಾಡುವುದಕ್ಕೆ ನಾನು ನಿಂತಿದ್ದೇನೆ.Vice-Chancellorರವರನ್ನು ನೇಮಕ ಮಾಡುವ ಒಂದು ಹಕ್ಕನ್ನು ನಾವು ಕಸಿದುಕೊಳ್ಳುತ್ತಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್:– ನೀವು ಹಕ್ಕನ್ನು ಕಸಿದುಕೊಳ್ಳುತ್ತಿಲ್ಲ. ಆದರೆ, ನೀವು Search Committee ಮಾಡಬೇಕಾದರೆ ಅದಕ್ಕೆ ಗೈಡ್‌ಲೈನ್ ಮತ್ತು ಪ್ಯಾರಾಮೀಟರ್ ಹಾಕಿ ನೀವು ಇದೇ ರೀತಿಯಲ್ಲಿ ಮಾಡಬೇಕೆಂದು ಒಂದುroad mapಅನ್ನು ಹಾಕುತ್ತಿದ್ದೀರಿ.

ಶ್ರೀ ಸಿ.ಟಿ.ರವಿ:– ಆ ರೀತಿ ಮಾಡಿಲ್ಲ. VC appointment ನಲ್ಲಿ ಮೊದಲು ಶಿಕ್ಷಣ ತಜ್ಞ ಎಂದು ಇತ್ತು. ಆದರೆ, ಶಿಕ್ಷಣತಜ್ಞರು ಎಂಬುದಕ್ಕೆ ಏನಿರಬೇಕೆಂಬುದಕ್ಕೆ ಒಂದು definition ಇರಲಿಲ್ಲ. ಈಗ ಏನು

ಹೇಳಿದ್ದೇವೆಂದರೆ, ಅವರು ಕನಿಷ್ಠಪಕ್ಷ 5 ವರ್ಷ Professorಆಗಿ ಕೆಲಸ ಮಾಡಿರಬೇಕು ಹಾಗೆಯೇ 5 PH.D ವಿಷಯಕ್ಕೆ ಸಂಬಂಧಪಟ್ಟಂತೆ ಗೈಡ್ ಮಾಡಿರಬೇಕೆಂದು ನಾವು ಈಗ definitionನಲ್ಲಿ ಹಾಕಿದ್ದೇವೆ. ಮತ್ತೊಂದು ವಿಷಯ Search Committee ಯಲ್ಲಿ ವಾಸ್ತವಿಕವಾಗಿ ಏನು ನಡೆಯುತ್ತದೆಂದರೆ, ಯಾರನ್ನು ಇಲ್ಲಿಗೆ ತರಬೇಕೆಂದು mentally fixಮಾಡಿಕೊಳ್ಳವುಂಥದ್ದು Search Committee ಯಲ್ಲಿ ನಡೆಯುತ್ತಿತ್ತು. ಆ ರೀತಿ ಆಗಬಾರದೆಂದು, ಯೋಗ್ಯತೆ ಇರುವವರು ಯಾರ್ಯಾರು ಇದ್ದಾರೆಂಬ ಬಗ್ಗೆ ಒಂದು short-list ಮಾಡಿ ಅದನ್ನು ಟೇಬಲ್ ಮುಂದೆ ಇಟ್ಟು ಲಿಸ್ಟ್‌ನಲ್ಲಿರುವವರನ್ನು ಅವರು ಆಯ್ಕೆ ಮಾಡಿಕೊಳ್ಳಬೇಕು. ಅದಕ್ಕೆ ಇವರು open ಆಗಿ call ಮಾಡಬೇಕು. ಇದರಿಂದ ಹೆಚ್ಚು ಪಾರದರ್ಶಕತೆ ಬರುತ್ತದೆ ಮತ್ತು ಹೆಚ್ಚು ಯೋಗ್ಯರು ಬರುವುದಕ್ಕೆ ಕಾರಣರಾಗುತ್ತಾರೆಯೇ ಹೊರತು ಬೇರೆ ಯಾವುದೇ ದುರುದ್ದೇಶ ಇಲ್ಲ. In the interest of the University, in the interest of education systemಇದನ್ನು ತಂದಿದ್ದೇವೆ. ಆದ್ದರಿಂದ ಇದರಲ್ಲಿ ಯಾವುದೇ ರೀತಿಯ ದುರುದ್ದೇಶ ನನಗೆ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್ :– ಮಾನ್ಯ ಸಚಿವರೆ, ನೀವು ತಂದಿರುವುದೆಲ್ಲcorrectಆಗಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಇದು ನಿಮ್ಮ ಕೆಲಸ. ಆದ್ದರಿಂದ, ಇದು ಆಗಬೇಕು. ಇದನ್ನು ಬಹಳ ದೊಡ್ಡದಾಗಿ comprehensive ಆಗಿ ಎರಡು ಮೂರು ವಿಚಾರಗಳನ್ನು ಇದರಲ್ಲಿ ತಾವು ಮಿಕ್ಸ್ ಮಾಡಿದ್ದೀರಿ. ಇದನ್ನು ಮಾಡುವುದು ಬೇಡ. ಇದನ್ನು ಎರಡು ಭಾಗವನ್ನಾಗಿ ಮಾಡಿ. At least ಅದಕ್ಕೆ ಸ್ವಲ್ಪ ಜೀವ ಸಿಗಲಿ. ನೀವು ಶ್ರಮ ತೆಗೆದುಕೊಂಡು ಇದನ್ನು ಮಾಡಿರುವುದು ಮತ್ತು positive approach ಗೆ ಹೋಗಿರವಂಥದ್ದು ಆಗಲಿ. ಆದರೆ, ವಾಸ್ತವಾಂಶ ತಮಗೆಲ್ಲ ಗೊತ್ತಿದೆ. ಮಳೆ–ಗುಡುಗು ಬರುತ್ತದೆಂದು ಗೊತ್ತಿದ್ದರೂ ಸಹ ನೀವು ಛತ್ರಿ ಹಿಡಿದುಕೊಂಡು ಹೋಗದಿದ್ದರೆ ಬಹಳ ಕಷ್ಟವಾಗುತ್ತದೆ. Let not this Bill be failed. In order to see you as successful Minister, I want to see you as a successful Minister. ಆದ್ದರಿಂದ, ಆsuccessಆಗಬೇಕಾದರೆ, ಎಲ್ಲೋ ಒಂದು ಕಡೆ give and takeಇರಬೇಕಾಗುತ್ತದೆ. ಆದ್ದರಿಂದ, ಆ ಸಂದರ್ಭ ನೋಡಿat least ಎರಡು ಭಾಗ ಮಾಡಿ. ಒಂದು ಬಿದ್ದು ಹೋದರೂ

ಉಳಿದ ಅನೇಕ ವಿಚಾರಗಳು ಪಾಸ್ ಆಗಿ ಬರಲಿ ಎಂಬ ದೃಷ್ಟಿಯಿಂದ ನಿಮಗೆ ನಾನು ಸಲಹೆ ಕೊಡುತ್ತಿದ್ದೇನೆ. ಇದು ಬೇಡ, ನಮ್ಮ ಹಣೆಬರಹ ಎಂದು ಜನರ ಗ್ಯಾಲರಿ ನೋಡಿಕೊಂಡು ಮಾತನಾಡುತ್ತೇನೆಂದರೆ ಮಾತನಾಡಿ.

ಶ್ರೀ ಸಿ.ಟಿ. ರವಿ:– ನಿಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ತಾವು ಯಾವ ಹಿನ್ನೆಲೆಯಲ್ಲಿ ಹೇಳುತ್ತಿದ್ದೀರೆಂಬುದು ನನಗೆ ಗೊತ್ತು. ನನಗೆ ಇದರ ಮೇಲೆ ವಿಶ್ವಾಸ ಇದೆ. ಅವರ ಪವರ್ ಅನ್ನು ಯಾರೂ ಕಿತ್ತುಕೊಂಡಿಲ್ಲ. ಸರ್ಕಾರಅಸಹಾಯಕರವಾಗಬಾರದೆಂಬ ಕಾರಣಕ್ಕೋಸ್ಕರ ಇನ್ನೊಂದು ಪವರ್ ಅನ್ನು ಕ್ರಿಯೇಟ್ ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ ಇಲ್ಲಿಯೂ ಕೂಡ ಇದಕ್ಕೆ ಅಂಗೀಕಾರ ಸಿಗುತ್ತದೆ ಮತ್ತೆ ಎಲ್ಲಿ ಸಹಿ ಹಾಕಬೇಕಾಗಿದೆಯೋ ಅಲ್ಲಿಯೂ ಸಹ ಸಿಗುತ್ತದೆಂದು ನನಗೆ ವಿಶ್ವಾಸ ಇದೆ. ಅಕಸ್ಮಾತ್ ಅಲ್ಲಿ ಸಹಿ ಹಾಕದಿದ್ದರೆ ಮತ್ತೊಂದು ಸಾರಿ ಈ ಸದನ ಪಾಸ್ ಮಾಡಿ ಕಳಹಿಸಿಕೊಟ್ಟರೆ ಅವರೂ ಸಹ ಹಾಕಬೇಕಾಗುತ್ತದೆ. ಆದ್ದರಿಂದ,democracyಉಳಿಯಬೇಕು ಮತ್ತೆ ಇದರ ಘನತೆ ಉಳಿಯಬೇಕು. ಒಬ್ಬ ವ್ಯಕ್ತಿಯ ಹಿತಾಸಕ್ತಿಗೋಸ್ಕರ ನಮ್ಮ ಈ ಘನತೆ ಕಳೆದು ಹೋಗಬಾರದು. ಆದ್ದರಿಂದ, ಇದನ್ನು ಅಂಗೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, Section16 ನೋಡಿ. Arrangement of work during the vacancy of the office of the vice chancellor-vc ಇಲ್ಲದೇ ಇದ್ದಾಗsenior most DeanರವರುVice chancellorಆಗಿ ಕೆಲಸ ಮಾಡಬಹುದೆಂದು ಪ್ರಾವಿಜನ್ ಮಾಡಿಕೊಂಡಿದ್ದಾರೆ. ನಾಳೆ ದಿವಸ ಮಾನ್ಯ ರವಿರವರ ಸರ್ಕಾರ ಬಂದು ಅವರೇ ಮಂತ್ರಿಗಳಾದರೆVice Chancellor ಬೇಕಾಗಿಲ್ಲ, Deanಗಳನ್ನು ಇಟ್ಟುಕೊಂಡು ಆಡಳಿತ ನಡೆಸಬಹುದಾಗಿದೆ.

ಅಧ್ಯಕ್ಷರು:–Arrangement and appointment is different. It is only an arrangement.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಬೀದರ್‌ನಲ್ಲಿ ಒಂದು Veterinary University ಇದೆ. ಅಲ್ಲಿ Vice chancellor retire ಆಗುತ್ತಾರೆ. ಅವರು ಉಮೇಶ್ ಕತ್ತಿಯವರಿಗೆ ಬಹಳ ಬೇಕಾದವರು ಹೊನ್ನಪ್ಪಗೋಳ ಎಂದು ಇದ್ದಾರೆ. Retire ಆದ ಮೇಲೆ ಅವರನ್ನು

ಬಿಡುವುದಕ್ಕೆ ಮನಸ್ಸು ಇಲ್ಲ. ಅವರನ್ನುspecial officer ಆಗಿ Appoint ಮಾಡುತ್ತಾರೆ. ಅವರಿಗೆ ಎಲ್ಲಾ ರೀತಿಯ Vice chancellor ಕೆಲಸ ಮಾಡುವುದಕ್ಕೆ ಅಧಿಕಾರ ಮಾಡಿ ಕೊಡುತ್ತೀರಿ. ಏನಾದರೂ ಸ್ವಲ್ಪ ಅವಕಾಶವನ್ನು ಕೊಟ್ಟರೆ ಯಾವ್ಯಾವ ರೀತಿಯಲ್ಲಿ ದುರುಪಯೋಗ ಆಗುತ್ತದೆ ಎನ್ನುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಸೆಕ್ಷನ್–16 ಏಕೆ ಬೇಕು? ಹೇಳಿ Vice chancellor term ಆದ ತಕ್ಷಣ ನೀವು advance ಆಗಿ ಮಾಡಿಬಿಡಿ. ನೀವು ಅವರನ್ನು ತೆಗೆದುಕೊಂಡು ಹೋಗಿ ಡೀನ್‌ಗೆ ಕೂಡಿಸುವುದು ಮಾಡುತ್ತೀರಿ.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಅಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ವಿಶ್ವವಿದ್ಯಾಲಯದಲ್ಲಿ ಲಭ್ಯವಾಗಿರುವ ಜೇಷ್ಠತೆಯ ಪ್ರಾಧ್ಯಾಪಕರನ್ನು ಒಂದು ತಿಂಗಳಿಗಿಂತ ಹೆಚ್ಚಿಲ್ಲದ ಅವಧಿಗೆ ಅಥವಾಕುಲಾಧಿಪತಿ ಅಥವಾ ಸಹ ಕುಲಾಧಿಪತಿಯವರು ವ್ಯವಸ್ಥೆಗಳನ್ನು ಮಾಡುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಕುಲಪತಿಯ ಪ್ರಸಕ್ತ ಕರ್ತವ್ಯಗಳ ಪ್ರಭಾರದಲ್ಲಿ ಒಂದು ತಿಂಗಳ ಅವಧಿಗೆ ನಿಯೋಜಿಸಬಹುದು. ಅಷ್ಟರೊಳಗೆ ಉಳಿದಿದ್ದ organization ಮಾಡಿಕೊಳ್ಳ–ಬೇಕೆಂದು ಹೇಳಿರುತ್ತೇವೆ. ಯಾರನ್ನು ಎಂದರೆ, ಇಲ್ಲಿ ಆಯ್ಕೆಗೆ ಅವಕಾಶವನ್ನು ಕೊಟ್ಟಿಲ್ಲ. ಇಲ್ಲಿ ಯಾರು ಸೀನಿಯರ್ ಪೋಸ್ಟ್ ಇರುತ್ತಾರೆ ಅವರನ್ನು ಮಾಡಬೇಕೆಂದು ಹೇಳಿದೆ.

ಶ್ರೀ ಡಿ.ಕೆ.ಶಿವಕುಮಾರ (ಕನಕಪುರ): ಮಾನ್ಯ ಅಧ್ಯಕ್ಷರೆ, ಜಾಸ್ತಿ pressure ಮಾಡಿ ರಬ್ ಮಾಡಿ ಕೊಳ್ಳುವುದಕ್ಕೆ ಹೋಗಬೇಡಿ. ಇದಕ್ಕೆ ಏನಾದರೂ ಮಾಡಿ ಒಂದು ಜೀವ ಕೊಡುವುದಕ್ಕೆ ಹೋಗೋಣ. ಇಲ್ಲಿ ಕೆಲವು controversial ವಿಚಾರಗಳು ಇವೆ. ಇವುಗಳನ್ನು ಸ್ವಲ್ಪ ಬಿಟ್ಟು ಒಂದು small amendment ತನ್ನಿ. ಮಾನ್ಯ ಜಯಚಂದ್ರವರು ಹೇಳಿದಂತೆ ನಾನೂ ಸಹby chance we are Educationists, by birth Agriculturist.By profession Businessman ಆದರೂ, ನನಗೂ ಕೆಲವು ವಿಚಾರಗಳು, institutionಗಳನ್ನು ನಡೆಸುವ ವಿಚಾರ University ಗಳ ವಿಚಾರ ಅನೇಕ Management, Syndicate, Boardಗಳಲ್ಲಿ ಕೆಲಸ ಮಾಡಿ ನನಗೆ ಅನುಭವ ಇದೆ. ಅದಕ್ಕೆ ಕೆಲವು ವಿಚಾರಗಳನ್ನು ಹೇಳುತ್ತಿದ್ದೇನೆ. ಆದರೂ ಕೆಲವು ವಿಚಾರಗಳು ಆಗುವುದಿಲ್ಲ. ನಾವು ಏನು ಅಂದುಕೊಳ್ಳುತ್ತೇವೆ ಅದನ್ನು

ಮಾಡುವುದಕ್ಕಾಗುವುದಿಲ್ಲ. ನೀವು ಹೇಳುವುದು ಎಲ್ಲಾ, this is a practical problem. Bangalore Universityಯ ಅವಾಂತರ ನಡೆಯುತ್ತಿತ್ತು. Governorಗೂ ಕೂಡ ಕೇಳುವ ಒಂದು ಶಕ್ತಿ ಇರಲಿಲ್ಲ. ಅವರಿಗೆ ಹೋಗುವುದಕ್ಕಾಗುತ್ತಿರಲಿಲ್ಲ. ಸರ್ಕಾರವನ್ನು ಕೇಳುವುದು, ಲೋಕಲ್ ಅವರನ್ನು ಕೇಳುವುದು, Education Ministerನ್ನು ಕೇಳುತ್ತಾರೆ,Education Secretaryಯವರನ್ನು ಕೇಳುತ್ತಾರೆ. we know that the Education Secretary doesn't have much powers on this and the gonernment doesn't have powers. But knowing the present fact ಇದನ್ನು ಯಾವುದಾದರೊಂದು ಸಂದರ್ಭದಲ್ಲಿ ನೇರವಾಗಿ ನೀವು ಹುತ್ತಕ್ಕೆ ಕೈ ಹಾಕದೆ ನಿಮಗೆ ಎಷ್ಟಕ್ಕೆ ಶಕ್ತಿ ಬೇಕು ಅಷ್ಟಕ್ಕೆ ಮಾತ್ರ ಈ ಬಿಲ್‌ನ್ನು ಉಪಯೋಗಿಸಿಕೊಳ್ಳಿ ಎಂದು ನಾನು ಮತ್ತೊಮ್ಮೆ ಸಲಹೆ ಮಾಡುತ್ತೇನೆ. Tomorrow morning againyou discuss with your officers or otherwise you take this and sit with H.E. the Governor for half an hour and come back.

ಶ್ರೀ ಬಂಡೆಪ್ಪ ಖಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಾಕಷ್ಟು ಸ್ಪಡಿ ಮಾಡಿದ್ದಾರೆ. ಇಲ್ಲಿ ಒಂದು ಡೌಟ್ ಏನೆಂದರೆ, ನಿಜಕ್ಕೂ ಇವೆಲ್ಲಾ ಸಿಸ್ಟಮ್ ಚೇಂಜ್ ಮಾಡುವುದಕ್ಕೆ ಸರ್ಕಾರ ಬಂದ ತಕ್ಷಣ ಒಂದು ವರ್ಷದಲ್ಲಿ ಯಾವ್ಯಾವ ಸಿಸ್ಟಮ್‌ನಲ್ಲಿ ಏನೇನು ನ್ಯೂನತೆ ಇದೆ ಅವೆಲ್ಲವನ್ನೂ ಕಂಡು ಹಿಡಿದು ಮಾಡಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಇಷ್ಟೆಲ್ಲಾ ಗೊಂದಲಗಳನ್ನು ಸೃಷ್ಟಿ ಮಾಡಿಕೊಂಡು ಏಕೆ ಮಾಡುತ್ತೀರಿ? you are counting days. ಇದಕ್ಕೆ ಎಲ್ಲೋ ಒಂದು ಕಡೆ ಡೌಟ್ ಬರುತ್ತದೆ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನೀವು ಬಂದು ಕುಳಿತುಕೊಳ್ಳುತ್ತೇವೆಂದು ನಿಮಗೆ ಆಶಾವಾದ ಇದೆ. ನಿಮಗೆ ವಿಶ್ವಾಸ ಇದೆ ತಾನೆ. ನಿಮಗೆ ಆ ಪವರ್ ಸಿಗಲಿ ಎಂದು ಮಾಡಿದ್ದೇನೆ. ನಿಮಗೆ ಆ ಧೈರ್ಯ ಇರುವುದಿಲ್ಲ. ನಾಳೆ ನೀವು ಗೌರ್ನರ್‌ವರನ್ನು ಎದುರು ಹಾಕಿಕೊಳ್ಳುವುದಕ್ಕೆ ನಿಮಗೆ ಪವರ್ ಸಿಗಲಿ ಎಂದು ಮಾಡಿದ್ದೇನೆ. ಆದರೆ ನನಗೆ ವಿಶ್ವಾಸ ಇದೆ. ಸರ್ಕಾರ ಎನ್ನುವುದು ಒಂದು ನಿರಂತರ. ವ್ಯಕ್ತಿ ಬದಲಾಗಬಹುದು. ಆ ಆಧಾರದ ಮೇಲೆ in the interest of the stateಮಾಡಿದ್ದೇವೆ.

ಅಧ್ಯಕ್ಷರು: ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರ ರೂಪದಲ್ಲಿರುವ –2013 ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ 2 ರಿಂದ 13

ಅಧ್ಯಕ್ಷರು: 2 ರಿಂದ 13ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

2 ರಿಂದ 13 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(2 ರಿಂದ 13 ರವರೆಗಿನ ಖಂಡಗಳನ್ನು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು: ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಥಮ ಖಂಡ, ಹೆಸರು ಮತ್ತು ಅವರತಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸುವುದು.

ಅಂಗೀಕಾರ ಪ್ರಸ್ತಾವ

ಶ್ರೀ ಸಿ.ಟಿ. ರವಿ(ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು)

2. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಧೇಯಕ–2013

ಪರ್ಯಾಲೋಚನಾ ಪ್ರಸ್ತಾವ

ಶ್ರೀಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಮಾನ್ಯ ಸಚಿವರು Explainಮಾಡಿ.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ Vice Chancellor ಅನ್ನು ನೇಮಕ ಮಾಡಬೇಕಾದರೆ ಸರ್ಕಾರದ ಸಹಮತಿ ಇಲ್ಲ ಕೇಳಬೇಕಾದ ಅವಶ್ಯಕತೆಯೂ ಇಲ್ಲ. ಈಗ ಸರ್ಕಾರದ ಸಹಮತಿಯೊಂದಿಗೆ ಉಳಿದ ವಿಶ್ವವಿದ್ಯಾಲಯಗಳಲ್ಲಿ Vice Chancellorಗಳ ನೇಮಕವಾಗುತ್ತದೆ ಆ ರೀತಿ ಸರ್ಕಾರದ ಸಹಮತಿಯೊಂದಿಗೆ ನೇಮಕ ಮಾಡಬೇಕು. ಇದನ್ನು ಸೆಕ್ಷನ್ 13(2)ರಲ್ಲಿ ಹೇಳಿದ್ದೇವೆ. ಸೆಕ್ಷನ್–13(3)ರಲ್ಲಿ ಉಳಿದ ವಿಶ್ವವಿದ್ಯಾಲಯಗಳಿಗೆ ಏನು ಹೇಳಿದೆ ಅದೇ ರೀತಿ Search Committee ಅರ್ಜಿಯನ್ನು ಆಹ್ವಾನಿಸಿ ಮೆರಿಟ್ ಲಿಸ್ಟ್ ಮಾಡಿ ಅದರ ಮೇಲೆ ಹೆಸರನ್ನು ಪ್ರಪೋಸಲ್ ಮಾಡತಕ್ಕಂಥದ್ದು. ಸೆಕ್ಷನ್–13(4)ರಲ್ಲಿ ಕುಲಪತಿಗಳ ಸೇವಾ ಅವಧಿ ಮೂರು ವರ್ಷ ಇದೆ ಉಳಿದ ವಿಶ್ವವಿದ್ಯಾನಿಲಯಗಳ ನಿಟ್ಟಿನಲ್ಲಿ 4 ವರ್ಷ, ಮುಂಚೆ ಹೇಗಿತ್ತು ಎಂದರೆ ಮೂರು ವರ್ಷ ಇತ್ತು. ಒಂದು ವರ್ಷ ಗೌರ್ನರ್‌ಗೆ ವಿಸ್ತರಿಸುವ ಅಧಿಕಾರ ಇತ್ತು. ಈಗ ವಿಸ್ತರಿಸುವ ಅಧಿಕಾರ ಇಲ್ಲ. ನೇಮಕ ಅವಧಿ 4 ವರ್ಷ ಎಂದು ಮಾಡಿದೆ. ಸೆಕ್ಷನ್–15 ರಲ್ಲಿ ರಿಜಿಸ್ಟ್ರಾರ್‌ನ್ನು ಆಡಳಿತ ಮಂಡಳಿಯ ಶಿಫಾರಸ್ಸಿನ ಮೇರೆಗೆ ಕುಲಪತಿಗಳನ್ನು ನೇಮಕ ಮಾಡುವುದನ್ನು ತೆಗೆದು ಹಾಕಿ ಇತರೆ ವಿಶ್ವವಿದ್ಯಾಲಯಳಿಗೆ ಇರುವಂತೆ ಸರ್ಕಾರ ರಿಜಿಸ್ಟ್ರಾರ್‌ಗಳನ್ನು ನೇಮಕ ಮಾಡಬೇಕು. ರಿಜಿಸ್ಟ್ರಾರ್‌ಗಳನ್ನು ನೇಮಕ ಮಾಡಬೇಕಾದರೆ ಮುಂಚೆ ಹೇಳಿದ ರೀತಿಯಲ್ಲಿ Registrar Administration ಅದರೆ IAS, IPS, KAS